ದಿನಾಂಕಃ 10.02.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

1. ಮ್ಯುಟೇಷನ್ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ 32 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಕೆ ಎನ್ ವಕೀಲರಿಂದಃ**

1. ನನ್ನನ್ನು ಬೆಟ್ಟದಳ್ಳಿ ಗ್ರಾಮದವರಿಗೆ ಮದುವೆ ಮಾಡಿರುತ್ತಾರೆ. ನನಗೆ 1994 ರಲ್ಲಿ ವಿವಾಹವಾಗಿರುತ್ತದೆ. ಮದುವೆಯ ನಂತರ ಬೆಟ್ಟದಳ್ಳಿ ಗ್ರಾಮದಲ್ಲಿ ವಾಸ ಇದ್ದೆವು ಎಂದರೆ 2 ವರ್ಷ ಮಾತ್ರ ವಾಸ ಇದ್ದೆ. ನಂತರ ಬೆಂಗಳೂರಿಗೆ ಹೋಗಿರುತ್ತೇನೆ. ಬೆಂಗಳೂರಿನಲ್ಲಿ ನನ್ನ ಗಂಡನೊಂದಿಗೆ ವಾಸ ಇದ್ದೆನು ಎಂದರೆ ಇಲ್ಲ ನಾನು ಒಬ್ಬಳೇ ಇದ್ದೆ. ನನ್ನ ಗಂಡ ಬೆಟ್ಟದಳ್ಳಿ ಗ್ರಾಮದಲ್ಲಿ ಇದ್ದರು. ನನ್ನ ಅಕ್ಕನ ಹೆಸರು ಪುಟ್ಟಲಕ್ಷ್ಮೀ ಅವರು ಈಗ ಮರಣ ಹೊಂದಿರುತ್ತಾರೆ. ಪುಟ್ಟಲಕ್ಷ್ಮೀಯವರ ಮದುವೆ ಯಾವಾಗ ಆಗಿರುತ್ತದೆ ಎಂದರೆ ನನ್ನ ವಿವಾಹದ 8-10 ವರ್ಷಗಳ ಹಿಂದೆ ಚಾಕನಹಳ್ಳಿ ಗ್ರಾಮದವರಿಗೆ ಮಾಡಿರುತ್ತಾರೆ. ಪುಟ್ಟಲಕ್ಷ್ಮೀಯವರು 1990 ರಲ್ಲಿ ಮರಣ ಹೊಂದಿರುತ್ತಾರೆ. ದಾವೆ ಸಲ್ಲಿಸುವಾಗ ಪುಟ್ಟಲಕ್ಷ್ಮೀಯವರ ಮಕ್ಕಳ ಹೆಸರು ಏನು ಎಂದು ತಿಳಿದುಕೊಂಡಿದ್ದೀರ ಎಂದರೆ ರಾಣಿ, ರೇಖ ಮತ್ತು ವನ. ಅವರ ಮಕ್ಕಳಲ್ಲಿ ರಾಣಿ ಎಂದು ಇರುವುದಿಲ್ಲ ಜಯಲಕ್ಷ್ಮೀ ಎಂದು ಇರುತ್ತದೆ ಎಂದರೆ ಸರಿಯಲ್ಲ. ರೇಖ ಎಂಬ ಹೆಸರಿರುವುದಿಲ್ಲ ಯಶೋಧ ಎಂದು ಇರುತ್ತದೆ ಎಂದರೆ ರೇಖ ಎಂದೇ ಕರೆಯುತ್ತಿದ್ದೆವು. ವನ ಎಂಬ ಹೆಸರಿರುವುದಿಲ್ಲ ಧನಲಕ್ಷ್ಮೀ ಎಂದು ಇರುತ್ತದೆ ಎಂದರೆ ವನ ಎಂದೇ ಕರೆಯುತ್ತಿದ್ದೆವು.

2. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ 1977. ನನ್ನ ತಾಯಿ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ 2015. ನನ್ನ ತಂಗಿ ಜಯಲಕ್ಷ್ಮೀಯನ್ನು ಯಾವ ಊರಿಗೆ ಮದುವೆ ಮಾಡಿರುತ್ತಾರೆ ಎಂದರೆ ಕರಗೋಡನಹಳ್ಳಿ, ಜಯಲಕ್ಷ್ಮೀ ರವರು 1992 ರಲ್ಲಿ ಮದುವೆಯಾಗಿರುತ್ತಾರೆ. 2ನೇ ಪ್ರತಿವಾದಿ ವಿವಾಹವಾದ

ನಂತರ ಅವರ ಗಂಡನ ಮನೆಯಲ್ಲಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಅವರ ತಂದೆ ತಾಯಿಗೆ ಒಬ್ಬನೇ ಗಂಡು ಮಗ ಎಂದರೆ ಸರಿ. ನನ್ನ ತಂದೆ ಪೌತಿಯಾದ ನಂತರ ಸಂಸಾರದ ಹೊರೆ 1ನೇ ಪ್ರತಿವಾದಿಯ ಮೇಲೆ ಬಿದ್ದಿರುತ್ತದೆ ಎಂದರೆ ನನ್ನ ತಾಯಿ ಸಹ ಇದ್ದರು. ನಮ್ಮ ತಾಯಿಯೇ ನಮ್ಮ ಮದುವೆ ಮಾಡಿರುತ್ತಾರೆ. ನಮ್ಮ ವಿವಾಹವಾದ ನಂತರ 1ನೇ ಪ್ರತಿವಾದಿ ನನ್ನ ತಾಯಿಯೊಂದಿಗೆ ಇದ್ದರು ಎಂದರೆ ನನ್ನ ತಾಯಿ ಪ್ರತ್ಯೇಕವಾಗಿದ್ದರು.

3. ದಾವಾ ಸ್ವತ್ತಿನ ದಾಖಲಾತಿಗಳನ್ನು ತಿಳಿದುಕೊಂಡಿದ್ದೀರ ಎಂದರೆ ನಾನೇ ತಿಳಿದುಕೊಂಡಿರುತ್ತೇನೆ. 1994 ರಲ್ಲಿ ಮದುವೆಯಾದ ನಂತರ ಪ್ರತೀ ವರ್ಷ ದಾವಾ ಸ್ವತ್ತಿನ ದಾಖಲಾತಿಗಳನ್ನು ತೆಗೆದು ನೋಡಿದ್ದೀರ ಎಂದರೆ ದಾಖಲಾತಿ ನೋಡಿರುವುದಿಲ್ಲ ಆದರೆ ನಮ್ಮ ತಾಯಿಯನ್ನು ನೋಡಿಕೊಂಡು ಹೋಗುತ್ತಿದ್ದೆವು. ನಮ್ಮ ಅಕ್ಕಂದಿರು ದಾಖಲಾತಿಗಳನ್ನು ನೋಡಿದ್ದಾರ ಎಂದರೆ ಇಲ್ಲ. ನನ್ನ ತಂದೆ ಪೌತಿಯಾದ ನಂತರ ಐಟಂ ನಂ.6 ನ್ನು ಹೊರತುಪಡಿಸಿ ಉಳಿದ ಸ್ವತ್ತುಗಳ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿರುತ್ತದೆ ಎಂದು ತಿಳಿದುಕೊಳ್ಳಲು ತೊಂದರೆ ಇತ್ತ ಎಂದರೆ ನಮ್ಮ ಸಂಸಾರದ ಜವಾಬ್ದಾರಿ ಇದ್ದ ಕಾರಣ ನೋಡಿರುವುದಿಲ್ಲ. ದಾವಾ ಸ್ವತ್ತುಗಳ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದು ನನ್ನ ತಾಯಿ ತಿಳಿಸಿರುತ್ತಾರ ಎಂದರೆ ಇಲ್ಲ. ನನ್ನ ತಂದೆ ತೀರಿಕೊಂಡ ನಂತರ ಎಷ್ಟು ವರ್ಷಗಳವರೆಗೂ ನನ್ನ ತಾಯಿ ಜವಾಬ್ದಾರಿ ವಹಿಸಿಕೊಂಡಿರುತ್ತಾರೆ ಎಂದರೆ ನಮ್ಮ ಮದುವೆಯಾದ ನಂತರ ನನ್ನ ತಾಯಿ 1ನೇ ಪ್ರತಿವಾದಿಯಿಂದ ಪ್ರತ್ಯೇಕವಾಗಿರುತ್ತಾರೆ. ನನ್ನ ತಾಯಿ ಮರಣ ಹೊಂದುವವರೆಗೂ ನನ್ನ ತಾಯಿಯಾಗಲೀ ನಾವಾಗಲೀ ದಾವಾ ಸ್ವತ್ತಿನ ಖಾತೆಯ ಬಗ್ಗೆ ತಿಳಿದುಕೊಂಡಿಲ್ಲವೇ ಎಂದರೆ ಇಲ್ಲ.

4. ನನ್ನ ತಾಯಿ 2014 ರಲ್ಲಿ ಮರಣ ಹೊಂದಿರುತ್ತಾರೆ. ದಾವಾ ಸ್ವತ್ತುಗಳ ಕಂದಾಯವನ್ನು ಯಾರು ಪಾವತಿಸುತ್ತಿದ್ದರು ಎಂದು ತಿಳಿದುಕೊಂಡಿದ್ದೀರ ಎಂದರೆ ಇಲ್ಲ. ನನ್ನ ತಾಯಿ ಮರಣ ಹೊಂದಿದ ನಂತರ ದಾವಾ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿರುತ್ತದೆ ತಿಳಿದುಕೊಂಡಿದ್ದೀರ ಎಂದರೆ ನನ್ನ ತಾಯಿ ತೀರಿಕೊಂಡ 6 ತಿಂಗಳ ನಂತರ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಕೊಟ್ಟಿರುತ್ತೇನೆ. ಖಾತೆ ಯಾರ ಹೆಸರಿಗೂ ಮಾಡಬಾರದು ಎಂದು

ಅರ್ಜಿ ಕೊಟ್ಟಿರುತ್ತೇನೆ. ಅರ್ಜಿ ಕೊಡುವ ಮೊದಲು ದಾವಾ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದು ತಿಳಿದುಕೊಂಡಿದ್ದೀರ ಎಂದರೆ ಇಲ್ಲ. ಈ ದಾವೆ ಸಲ್ಲಿಸುವ ಮೊದಲು ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿತ್ತು ಎಂದು ತಿಳಿದುಕೊಂಡಿದ್ದೀರ ಎಂದರೆ ಇಲ್ಲ. ಸ.ನಂ.73/3 1 ಗುಂಟೆ ಜಮೀನನ್ನು 1ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಸ್ವತ್ತು. ಐಟಂ ನಂ.7 ಮತ್ತು 27 ಒಂದೇ ಸ್ವತ್ತಾಗಿರುತ್ತದೆ ಎಂದರೆ ಹೌದು.

5. ದಾವಾ ಸ್ವತ್ತುಗಳ ಖಾತೆ 1988 - 89 ರಲ್ಲೇ 1ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ದಾಖಲಾತಿಗಳನ್ನು ಯಾರು ಪಡೆದಿರುತ್ತಾರೆ ಎಂದರೆ ನಾನೇ. ಆಗ ಖಾತೆ ಯಾರ ಹೆಸರಿನಲ್ಲಿತ್ತು ಎಂದರೆ 1ನೇ ಪ್ರತಿವಾದಿ. ಅದನ್ನು ವಕೀಲರಿಗೆ ನೀಡಿರುತ್ತೇನೆ. ಸದರಿ ಖಾತೆಯನ್ನು ಪ್ರಶ್ನೆ ಮಾಡಲು ತೊಂದರೆ ಇತ್ತ ಎಂದರೆ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತೇನೆ. ನಾನಾಗಲೀ ನನ್ನ ಅಕ್ಕಂದಿರಾಗಲೀ 1ನೇ ಪ್ರತಿವಾದಿ ಹೆಸರಿರುವ ಖಾತೆಯನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಖಾತೆ 1ನೇ ಪ್ರತಿವಾದಿ ಹೆಸರಿನಲ್ಲಿರುವ ವಿಚಾರ ಗೊತ್ತಿರಲಿಲ್ಲ.

6. 1ನೇ ಪ್ರತಿವಾದಿ ನಮ್ಮ ಮದುವೆಯನ್ನು ಮಾಡಿ ಎಲ್ಲಾ ಖರ್ಚುಗಳನ್ನು ವಹಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿದ್ದೇನೆ. ಏನೆಂದು ಬರೆಸಿರುತ್ತಾರೆ ಎಂದರೆ ಖಾತೆಯಾಗಿರುವುದು ಗೊತ್ತಿರುವುದಿಲ್ಲ ಎಂದು.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .